ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಸಿಸಿಟೆಕ್/2017-18 /952

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:14-07-2017

## -: ಸುತ್ತೋಲೆ :-

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕಗಳು ಆಯೋಜಿಸುವ ಅಲ್ಪಾವಧಿ ತರಬೇತಿಗಳಿಗೆ ಸಂಬಂಧಿಸಿದಂತೆ ಅನುಸರಿಬೇಕಾದ ನಿಯಮ(ನಿಬಂಧನೆ)/ಷರತ್ತುಗಳನ್ನು ಪಾಲಿಸುವ ಬಗ್ಗೆ.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕಗಳಲ್ಲಿ ಅಲ್ಪಾವಧಿ ತರಬೇತಿಗಳನ್ನು ಆಯೋಜಿಸುವ ಸಂಸ್ಥೆಗಳ ಪ್ರಾಚಾರ್ಯರು/ವ್ಯವಸ್ಥಾಪಕರು ಅಲ್ಪಾವಧಿ ತರಬೇತಿಗಳನ್ನು ನಡೆಸಲು ತಾಂತ್ರಿಕ ಶಿಕ್ಷಣ ಇಲಾಖೆಗೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುವಾಗ ಈ ಕೆಳಕಂಡ ನಿಯಮ(ನಿಬಂಧನೆ)/ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.

1. ಅಲ್ಪಾವಧಿ ತರಬೇತಿ ನಡೆಸುವ ಸಂಬಂಧ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಾಗ ಅರ್ಜಿ ನಮೂನೆ, ವೇಳಾಪಟ್ಟಿ, ಕೋರ್ಸಿನ ವಿಷಯ ಪರಿವಿಡಿ, ಸಂಪನ್ಮೂಲ ವ್ಯಕ್ತಿಗಳ ವೈಯಕ್ತಿಕ ಮಾಹಿತಿ (ರೆಸ್ಯೂಂ), ಸರ್ಕಾರದ ಇತರೆ ಯೋಜನೆಗಳಿಂದ ತರಬೇತಿಗೆ ನಿಯುಕ್ತಿಗೊಂಡ ಅಬ್ಯರ್ಥಿಗಳ ಆದೇಶ ಪ್ರತಿ ಇತ್ಯಾದಿ ವಿವರಗಳ ಮಾಹಿತಿ ನೀಡುವುದು.
2. ಅಲ್ಪಾವಧಿ ತರಬೇತಿಗೆ ಸಂಬಂಧಿಸಿದ ವಿಷಯವನ್ನು ಬೋಧಿಸುವ ಉಪನ್ಯಾಸಕರನ್ನು ಆಧ್ಯತೆಯ ಮೇರೆಗೆ ಪ್ರತಿ ಸಂಸ್ಥೆಯಿಂದ ಸದರಿ ವಿಭಾಗದಿಂದ ಒಬ್ಬರಂತೆ, ಪ್ರತಿ ಬ್ಯಾಚ್‌ಗೆ ಗರಿಷ್ಟ 30 ಅಭ್ಯರ್ಥಿಗಳಿಗೆ ಸೀಮಿತಗೊಳಿಸುವುದು ಮತ್ತು ನೊಂದಾಯಿತ ಅಭ್ಯರ್ಥಿಗಳ ಪಟ್ಟಿಗೆ ತರಬೇತಿ ಪ್ರಾರಂಭಿಸುವ ಮೊದಲು ಕಡ್ಡಾಯವಾಗಿ ಇಲಾಖೆಯಿಂದ ಅನುಮೋದನೆ ಪಡೆಯುವುದು.
3. ಅಲ್ಪಾವಧಿ ತರಬೇತಿಗೆ ಹಾಜರಾದ ಅಭ್ಯರ್ಥಿಗಳ ಹಾಜರಾತಿಯನ್ನು ಕಡ್ಡಾಯವಾಗಿ ಎರಡು ಬಾರಿ ಪಡೆಯುವುದು (ಪ್ರತಿ ದಿನ ಬೆಳಗ್ಗೆ/ಪ್ರಾರಂಭದ ವೇಳೆ ಮತ್ತು ಸಂಜೆ/ಅಂತ್ಯದ ವೇಳೆ).
4. ಅಲ್ಪಾವಧಿ ತರಬೇತಿಗೆ ಹಾಜರಾದ ಅಭ್ಯರ್ಥಿಗಳಿಗೆ ಕಿರು ಪರೀಕ್ಷೆ ನಡೆಸಿ ಗುಣಮಟ್ಟ ಪರೀಕ್ಷಿಸುವುದು.
5. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆಯದೇ ನಡೆಸಿರುವ/ನಡೆಸುವ ಅಲ್ಪಾವಧಿ ತರಬೇತಿಗಳಿಗೆ ಇಲಾಖೆಯಿಂದ ಘಟನೋತ್ತರ ಅನುಮತಿ ನೀಡಲಾಗುವುದಿಲ್ಲ.
6. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆಯದೆ, ಅಲ್ಪಾವಧಿ ತರಬೇತಿಗಳನ್ನು ನಡೆಸುತ್ತಿರುವುದು ಕಂಡುಬಂದಲ್ಲಿ ಸಿಸಿಟೆಕ್ ಉಪಘಟಕದ ಮಾನ್ಯತೆಯನ್ನು ರದ್ದುಪಡಿಸಲಾಗುವುದು.
7. ಸಿಸಿಟೆಕ್ ಉಪಘಟಕಗಳು ಇಲಾಖೆಯ ಅನುಮೋದನೆ ಪಡೆದು, ಅಲ್ಪಾವಧಿ ತರಬೇತಿಗಳನ್ನು ನಿಯಮಾನುಸಾರ ನಡೆಸದಿರುವುದು ಕಂಡುಬಂದಲ್ಲಿ, ಸಿಸಿಟೆಕ್ ಉಪಘಟಕದ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

--2

8. ಅಲ್ಪಾವಧಿ ತರಬೇತಿ ನಡೆಸಲಾದ ಒಂದು ತಿಂಗಳೊಳಗಾಗಿ ತರಬೇತಿಯ ಸಲುವಾಗಿ ಪಡೆದ ಶುಲ್ಕ ಖರ್ಚು ವೆಚ್ಚಗಳ ಪಟ್ಟಿಯ ಸಮೇತ ಭಾಗವಹಿಸಿದ ಅಭ್ಯರ್ಥಿಗಳ ಪಟ್ಟಿಯೊಂದಿಗೆ ಸಮಗ್ರ ವರದಿಯನ್ನು ಹಾಗೂ ಲಾಭಾಂಶದ ಶೇ.25ರ ಮೊತ್ತವನ್ನು ಡಿ.ಡಿ. ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆಯ/ಕಾರ್ಯದರ್ಶಿಗಳು, ನಿರಂತರ ತಾಂತ್ರಿಕ ಶಿಕ್ಷಣ ಕೇಂದ್ರ ಬೆಂಗಳೂರು ಇವರ ಹೆಸರಿಗೆ ಸಂದಾಯವಾಗುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)
14/11/17

ಇವರಿಗೆ:-

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

2. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು, ಡಿ.ಟಿ.ಇ. ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.